# ಅನಾವರಣ

## ಪ್ರತಿಭೆಗಳ ಪ್ರತಿಬಿಂಬ



Little Kite Unit
GHSS Bekur

# ಮುನ್ನುಡಿ

**ಎ**ಳೆ ಮನಸುಗಳ ಸುಪ್ತ ಪ್ರತಿಭೆಗಳಿಗೆ ಈ **'ಅನಾವರಣ'**ವೇ ಸಾಕ್ಷಿಯೆನಿಸಿದೆ. ಇದು ಮಕ್ಕಳಲ್ಲಿ ಹುದುಗಿರುವ ಪ್ರತಿಭೆಗಳನ್ನು ಹೊರಗೆಳೆಯುವುದಲ್ಲದೇ ಅವರಲ್ಲಿ ಬರೆಯುವ ಹವ್ಯಾಸವನ್ನು ಹೆಚ್ಚಿಸುತ್ತಾ ,ಕಥೆ, ಕವನ , ಲೇಖನಗಳನ್ನು ರಚಿಸುವ ಆಸಕ್ತಿಯನ್ನು ಬೆಳೆಸುತ್ತದೆ. ಇದು ವಿದ್ಯಾರ್ಥಿಗಳ ಸೃಜನ ಶೀಲ ಬರಹಗಳಾಗಿವೆ.ಇದರಲ್ಲಿ ಬೇರೆಯವರ ಕೈಯಾಡಿಸುವಿಕೆಯಿಲ್ಲ.

ಸಾಹಿತ್ಯ ಕ್ಷೇತ್ರದ ಪುಟ್ಟಹೆಜ್ಜೆಗಳಾದ ಈ ಸೃಜನಶೀಲ ಬರಹಗಳು ಬಹುಭಾಷಾ ರೂಪಗಳಲ್ಲಿ ಮೂಡಿಬಂದಿವೆ. ವಿದ್ಯಾರಂಗ ಸಾಹಿತ್ಯ ವೇದಿಕೆಯ ಆಶ್ರಯದೊಂದಿಗೆ ಸರಳವಾದ ಭಾಷಾಶೈಲಿಯಲ್ಲಿ ಮೂಡಿಬಂದ ಈ ರಚನೆಗಳ ಜೊತೆಗೆ ಶಾಲಾ ಜೀವನದ ವಿವಿಧ ಘಟನೆಗಳು, ದಿನಾಚರಣೆಗಳನ್ನು, ಒಡನಾಡಿಗಳನ್ನು ನೆನಪಿಸುವ ಭಾವಚಿತ್ರ ಗಳನ್ನು ಪ್ರಕಟಿಸಲಾಗಿದೆ.ಆ ಮೂಲಕ ಶಾಲಾಜೀವನದ ನೆನಪನ್ನು ಸದಾ ನೆನೆಯುವಂತೆ ಮಾಡಲಾಗಿದೆ.

ಈ ಸಂಚಿಕೆಯ ಪ್ರಕಟಣೆಗೆ ತುಂಬು ಮನಸ್ಸಿನಿಂದ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಸಹಕಾರವಿತ್ತ ಶಾಲಾ ಸರ್ವಸದಸ್ಯರಿಗೂ ಆಬಾರಿಗಳಾಗಿರುವೆವು. ಅದರಲ್ಲೂ ಸಂಪೂರ್ಣ ಸಹಾಯ ನೀಡಿದ ನಿಶಾಳಿಗೂ ವಂದನೆಗಳು. ಈ ಹೊತ್ತಗೆ ಇನ್ನಷ್ಟು ಬೆಳೆಯಲಿ ....ಎಂದು ಹಾರೈಸುವ,

ಸಂಪಾದಕ ಮಂಡಳಿ ಪರವಾಗಿ,
ಭಾಗ್ಯಲಕ್ಷ್ಮೀ
ಕನ್ನಡ ಅಧ್ಯಾಪಕಿ



# ಶುಭ ಹಾರೈಕೆಗಳು



ಒಂದು ಹೊಸ ಶೈಕ್ಷಣಿಕ ವರ್ಷಕ್ಕೆ ನಾವಿಂದು ಕಾಲಿಟ್ಟಿದ್ದೇವೆ. ಇಲ್ಲಿ ನಮಗೆಲ್ಲವೂ ಹೊಸತು. ಆ ಹೊಸತನವನ್ನು ತಿಳಿದುಕೊಳ್ಳೋಣ ,ನಮ್ಮ ಅರಿವಿನ ಜ್ಞಾನವನ್ನು ಹೆಚ್ಚಿಸೋಣ. ಜೊತೆಗೆ ಪ್ರಕೃತಿಯ ರಮ್ಯತೆಯನ್ನು ನಿಗೂಢತೆಯನ್ನು ವಿಜ್ಞಾನ , ಚರಿತ್ರೆ , ಗಣಿತ ಹಾಗೂ ಭಾಷಾ ಅಧ್ಯಯನದಿಂದ ತಿಳಿದುಕೊಂಡು ಎಲ್ಲರಿಗೂ ಹಂಚಿಕೊಳ್ಳೋಣ. ಈ ಕಾರ್ಯಕ್ಕೆ ಅನಾವರಣ ಸಂಚಿಕೆ ಸಹಾಯವಾಗಲಿ. ಜ್ಞಾನದ ಹಸಿವು ಸದಾ ನಿಮಗಿರಲಿ , ಜೊತೆಗೆ ಪ್ರಕೃತಿ ಸ್ನೇಹ ನಿಮ್ಮದಾಗಲಿ.

ಶುಭಾಶಯಗಳೊಂದಿಗೆ,

**ಲಕ್ಷ್ಮೀ ಎಂ. ಎ ,**
**ಮುಖ್ಯೋಪಾಧ್ಯಾಯಿನಿ**
**ಸರಕಾರಿ ಉನ್ನತ ಪ್ರೌಢಶಾಲೆ**
**ಬೇಕೂರು**

**ಅನಾವರಣದೊಳಗೊಂದು ಇಣುಕು ನೋಟ.................**

# ಅನುಕ್ರಮಣಿಕೆ


| ಕ್ರಮ ಸಂಖ್ಯೆ | ವಿಷಯ |
|---|---|
| 1 | ವಿದ್ಯಾರ್ಥಿಗಳು ಬೆಳೆಸಿಕೊಳ್ಳಬೇಕಾದ ನೈತಿಕಮೌಲ್ಯಗಳು |
| 2 | ಅತೀ ಆಸೆ ಗತಿಗೇಡು |
| 3 | ಗಾದೆ ಮಾತುಗಳು |
| 4 | ಪ್ರಕೃತಿ ಗೀತೆ |
| 5 | ಚಿತ್ರ ರಚನೆ |
| 6 | ವಿಶೇಷ ಬಹುಮಾನ ಯಾರಿಗೆ |
| 7 | ಎರಡು ಗಿ ಳಿಗಳ ಕಥೆ |
| 8 | ಓದಿನ ಮಹತ್ವ |
| 9 | ನನ್ನಮ್ಮ |
| 10 | ಮಾವ ತಂದು ಕೊಟ್ಟ ಕಾರು |
| 11 | എന്റെ ബാല്യം |
| 12 | ಹಾಸ್ಯ ಚಟಾಕಿ |
| 13 | *My Mother* |
| 14 | ವರ್ಣರಂಜಿತ ಆಕೃತಿಗಳು |
| 15 | ಗೆಳೆತನ |
| 16 | ಸಹಾಯದ ಅವಶ್ಯಕತೆ |
| 17 | **My Friend** |

| | |
|---|---|
| 18 | ಕರುಳ ಕೂಗು |
| 19 | ಜನಸಂಖ್ಯಾ  ಸ್ಫೋಟ ಭಾರತ ಎದುರಿಸುತ್ತಿರುವ ಸಮಸ್ಯೆಗಳು |
| 20 | മഴക്കാലം |
| 21 | *LIFE CHANGES WHEN DESTINY BRINGS* |
| 22 | *ಮಧುರ ಕ್ಷಣಗಳು* |

# ವಿದ್ಯಾರ್ಥಿಗಳು ಬೆಳೆಸಿಕೊಳ್ಳಬೇಕಾದ ನೈತಿಕಮೌಲ್ಯಗಳು

**ವಿ**ದ್ಯಾರ್ಥಿಗಳು ಬೆಳೆಸಿಕೊಳ್ಳಬೇಕಾದ ನೈತಿಕಮೌಲ್ಯಗಳೆಂದರೆ ಉತ್ತಮ ಗುಣನಡತೆ, ಪ್ರಾಮಾಣಿಕತೆ, ನೈಪುಣ್ಯತೆ, ಮಾನವೀಯ ಮೌಲ್ಯ ...ಇತ್ಯಾದಿ ವಿಚಾರಗಳಿಂದ ಆದರ್ಶ ವ್ಯಕ್ತಿತ್ವವನ್ನು ರೂಪಿಸಿಕೊಂಡಿರಬೇಕು. ಪ್ರತಿಯೊಬ್ಬನಿಗೂ ಒಬ್ಬ ಗುರುವಿರಬೇಕು. ಗುರು ತೋರಿದ ದಾರಿಯಲ್ಲಿ ನಡೆದಾಗಲೇ ಜೀವನದ ಗುರಿ ತಲುಪಲು ಸಾಧ್ಯ. ಎಲ್ಲರಲ್ಲಿಯೂ ಒಂದಲ್ಲ ಒಂದುರೀತಿಯ ಪ್ರತಿಭೆ ಇದ್ದೇ ಇರುತ್ತದೆ.ಆ ಪ್ರತಿಭೆಯನ್ನು ಹೊರಗೆಳೆಯಲು ಸದಾವಕಾಶವನ್ನು ಕಲ್ಪಿಸುವುದೇ ಶಾಲೆ. ಮಕ್ಕಳಲ್ಲಿ ಉತ್ತಮ ಮೌಲ್ಯಗಳನ್ನು ಬೆಳೆಸುವಲ್ಲಿ ಶಾಲೆಯ ಪಾತ್ರ ಮಹತ್ತರವಾದುದಾಗಿದೆ. ಒಂದು ಸಂದೇಶದಂತೆ ಪುಸ್ತಕವು ಹೇಳುತ್ತದೆ, **“ನೀನು ತಲೆತಗ್ಗಿಸಿ ನನ್ನನ್ನು ಓದಿದರೆ ನಿನ್ನನ್ನು ಸಮಾಜದಲ್ಲಿ ತಲೆ ಎತ್ತುವಂತೆ ಮಾಡುತ್ತೇನೆ. ಆದರೆ ಮೊಬೈಲ್ ಹೇಳುತ್ತದೆ, ನೀನು ತಲೆತಗ್ಗಿಸಿ ನನ್ನನ್ನು ನೋಡಿದರೆ ಸಮಾಜದಲ್ಲಿ ನಿನ್ನನ್ನು ತಲೆಎತ್ತದಂತೆ ಮಾಡುತ್ತೇನೆ”**. ಆದುದರಿಂದ ವಿದ್ಯಾರ್ಥಿಗಳಾದ ನಾವು ಬಹಳಷ್ಟು ಒಳ್ಳೆಯ ಪುಸ್ತಕಗಳನ್ನು ಓದಿ ಉತ್ತಮ ಜ್ಞಾನಸಂಪಾದನೆ ಸಾಧ್ಯವಾಗುವುದು.

**ಧೀರಜ್ ಸಾಲಿಯಾನ್**

**೧೦ ಎ**

# ಅತೀ ಆಸೆ ಗತಿಗೇಡು

**ರಾ**ಮು ಮತ್ತು ಸೋಮು ತುಂಬಾ ಆತ್ಮೀಯ ಗೆಳೆಯರಾಗಿದ್ದರು. ತಾವು ಚಿಕ್ಕಂದಿನಿಂದಲೇ ಒಟ್ಟಿಗೆ ತಮ್ಮ ವಿದ್ಯಾಭ್ಯಾಸವನ್ನು ಮುಗಿಸಿದರು. ರಾಮು ಅತೀವ ಬುದ್ದಿವಂತ ಮತ್ತು ಒಳ್ಳೆಯವನು ಆಗಿದ್ದನು.ಆದರೆ ಸೋಮು ಬಹಳ ಸೋಮಾರಿಯಾಗಿದ್ದನು.ಇಬ್ಬರೂ ದೊಡ್ಡವರಾದರು. ರಾಮು ಸೋಮುವಿನಲ್ಲಿ ನಾವಿಬ್ಬರೂ ಸೇರಿ ಕೃಷಿಕರಾಗೋಣ ಎಂದಾಗ ಸೋಮು ಅದಕ್ಕೆ ತಲೆಬಾಗಿದನು. ಇಬ್ಬರೂ ಒಂದುಗೂಡಿ ಕೃಷಿ ಬೆಳೆದು ಉತ್ತಮ ಫಸಲಿನ ಮೂಲಕ ಬಹಳಷ್ಟು ಆದಾಯವನ್ನು ಸಂಪಾದಿಸಿದರು. ಬಂದ ಆದಾಯವನ್ನು ಇಬ್ಬರೂ ಸಮಾನಾಗಿ ಹಂಚಿಕೊಂಡು ತಂತಮ್ಮ ಮನೆಗಳಿಗೆ ಸಾಗಿದರು.ರಾಮು ಮನೆಗೆ ಬಂದಾಗ ಆತನ ಪತ್ನಿ ಆತನನ್ನು ಕಂಡು ಅತೀವ ಆನಂದಪಟ್ಟಳು.ಆದರೆ ಸೋಮುವಿನ ಹೆಂಡತಿ ಬೇಸರದಿಂದ



ನೀವು ಆ ರಾಮುವಿಗಿಂತಲೂ ಅಧಿಕ ಹಣ ಪಡೆಯಬೇಕು ಎಂದು ಹೇಳುತ್ತಾಳೆ.

ಅದರಂತೆಯೇ ಸೋಮು ಮುಂದಿನ ಕೃಷಿಕಾರ್ಯದಲ್ಲಿ ಸೋಮಾರಿತನವನ್ನು ತೋರಿದ.ಇದನ್ನು ನೋಡಿದ ರಾಮು ತನ್ನ ಗೆಳೆಯನಿಗೆ ಕೆಲಸ ಮಾಡಿ ಸುಸ್ತಾಗಿರಬೇಕೆಂದುಕೊಂಡು ಸುಮ್ಮನಿದ್ದ.ಒಂದು ದಿನ ರಾತ್ರಿ ಸೋಮು ಮತ್ತು ಅವನ ಹೆಂಡತಿ ರಾಮುವಿನ ಕೃಷಿ ತೋಟಕ್ಕೆ ಬಂದು ಹಲವಾರು ಬೆಳೆಗಳನ್ನು ಕದ್ದು ಮನೆಗೆ ಒಯ್ದರು. ಮಾರನೆ ದಿನ ಬೆಳಗ್ಗೆ ತೋಟಕ್ಕೆ ಬಂದ ರಾಮು ಕೃಷಿಬೆಳೆಗಳಲ್ಲಾದ ವ್ಯತ್ಯಾಸವನ್ನು ಕಂಡು ಬಹಳ ದು:ಖಿತನಾದ. ಒಂದೆರಡು ದಿನ ಇದೇ ರೀತಿ ಮುಂದುವರಿದಾಗ ಅನುಮಾನಗೊಂಡ ರಾಮು ಇದು ಕಾಡುಪ್ರಾಣಿಗಳ ಕಾಟವಲ್ಲವೆಂಬುದನ್ನು ಮನಗಂಡನು.ತೋಟದಲ್ಲಾಗುವ ವ್ಯತ್ಯಾಸ ತಿಳಿಯಲು ಒಂದು ಉಪಾಯವನ್ನು ಹೂಡಿದನು. ಅದಕ್ಕಾಗಿ ತೋಟದ ಪ್ರವೇಶದ್ವಾರದ ಸಮೀಪ ಒಂದು ಹೊಂಡವನ್ನು ಮಾಡಿ ಯಾರೂ ತಿಳಿಯದಂತೆ ತರಗೆಲೆಗಳಿಂದ ಅದನ್ನು ಮುಚ್ಚಿದನು. ಇದನ್ನರಿಯದೇ ಎಂದಿನಂತೆಯೇ ರಾತ್ರಿ ಹೊತ್ತಿನಲ್ಲಿ ಬಂದ ಸೋಮು ಮತ್ತು ಆತನ ಪತ್ನಿ ಹೊಂಡದಲ್ಲಿ ಬಿದ್ದು ಹೊರಳಾಡಿದರು. ಮರುದಿನ ಬೇಗನೆ ಎದ್ದು ತೋಟಕ್ಕೆ ಬಂದ ರಾಮು ಹೊಂಡದಲ್ಲಿ ಬಿದ್ದ ತನ್ನ ಗೆಳೆಯನ್ನು ಕಂಡು ಆಶ್ಚರ್ಯಗೊಂಡು ಬಹಳ ಬೇಸರ ವ್ಯಕ್ತಪಡಿಸಿದನು. ಆ ಕ್ಷಣದಲ್ಲಿ ತನ್ನ ತಪ್ಪನ್ನರಿತ ಸೋಮು ರಾಮುವಿನಲ್ಲಿ ಕ್ಷಮೆಯಾಚಿಸಿದ.

ಕಾವ್ಯ

೧೦ ಎ

# ಗಾದೆ ಮಾತುಗಳು

- ಕೈ ಕೆಸರಾದರೆ ಬಾಯಿ ಮೊಸರು
- ದುಂದು ವೆಚ್ಚ ಮಾಡಬಾರದು
- ಬೆಂಕಿಯಿಲ್ಲದೆ ಹೊಗೆ ಇಲ್ಲ
- ಹೊಸ ಡಾಕ್ಟರ್ ಗಿಂತ  ಹಳೆ ರೋಗಿಯೇ ಮೇಲು
- ಹತ್ತು ಉದ್ರಿಗಿಂತ ಒಂದು ನಗದು ಉತ್ತಮ
- ಅತೀ ಸ್ನೇಹ ಗತಿ ಕೆಡಿಸಿತು
- ಅಲ್ಪ ವಿದ್ಯಾ ಮಹಾಗರ್ವಿ
- ಓದಿ ಓದಿ ಮರುಳಾದ ಕೂಚು ಭಟ್ಟ
- ಬೊಗಳುವ ನಾಯಿ ಕಚ್ಚುವುದಿಲ್ಲ
- ಬೆಕ್ಕಿಗೆ ಆಟ ಇಲಿಗೆ ಪ್ರಾಣ ಸಂಕಟ
- ಆಡಿದಂತೆ ಮಾಡಬೇಕು
- ರೋಗಕ್ಕೆ ಮೊದಲೇ ತಡೆ ಒಳ್ಳೆಯದು
- ತಾಳಿದವನು ಬಾಳಿಯಾನು
- ಸಾಧಿಸಿದರೆ ಸಬಲ ನುಂಗಬಹುದು
- ಆಳಾಗಬಲ್ಲವ ಅರಸನಾಗಬಲ್ಲ
- ಹನಿ ಹನಿ ಗೂಡಿ ಹಳ್ಳ ತೆನೆ ತೆನೆ ಗೂಡಿ ಬಳ್ಳ
- ಬುದ್ಧಿ ಇಲ್ಲದವ ಹದ್ದಿಗಿಂತ ಕಡೆ
- ಕಾಗೆ ಕೊಂಡು ಹದ್ದಿಗೆ ಹಾಕಿದಂತೆ
- ಕಂಕುಳಲ್ಲಿ ದೊಣ್ಣೆ ಕೈಯಲ್ಲಿ ಶರಣಾರ್ಥಿ

- ಕಳ್ಳನ ಕೈಯಲ್ಲಿ ಕೀಲಿ ಕೈ ಕೊಟ್ಟಂತೆ
- ಸತ್ಯವಂತನಿಗೆ ಎತ್ತಲೂ ಭಯವಿಲ್ಲ
- ಹೊತ್ತಿಗೆ ಒದಗಿದ ಮಾತು ಸತ್ತವನು ಎದ್ದು ಬಂದಂತೆ
- ನಾಳೆ ಎಂಬುವವನ ಮನೆ ಹಾಳು
- ಒಂದೇ ಹೂವಿನಿಂದ ಮಾಲೆ ಆಗದು
- ಕಂಡದ್ದು ಆಡಿದರೆ ಕೆಂಡದಂತೆ ಕೋಪ
- ತಾನೇ ಕಳ್ಳ ಪರರ ನಂಬ
- ಹೆತ್ತ ತಾಯಿಗೆ ಹೆಗ್ಗಣವು ಮುದ್ದು
- ಹೊತ್ತು ಹೋದರೆ ಮತ್ತೆ ಸಿಗದು
- ಒಗ್ಗಟ್ಟಿನಲ್ಲಿ ಬಲವಿದೆ
- ಮನಸಿದ್ದರೆ ಮಾರ್ಗ
- ಕಾಯಕವೇ ಕೈಲಾಸ
- ಗಿಡವಾಗಿ ಬಗ್ಗದು ಮರವಾಗಿ ಬಗ್ಗಿತೇ
- ಬೆಳೆಯ ಸಿರಿ ಮೊಳಕೆಯಲ್ಲಿ
- ಹಾಸಿಗೆ ಇದ್ದಷ್ಟು ಕಾಲು ಚಾಚಬೇಕು
- ಯಥಾ ರಾಜ ತಥಾ ಪ್ರಜಾ
- ಬಗ್ಗಿದವನಿಗೆ ಒಂದು ಗುದ್ದು ಹೆಚ್ಚು
- ತಾಯಿಯಂತೆ ಕರು ನಾಯಿಯಂತೆ ಬಾಲ
- ಮಾತು ಬರದಿದ್ದರೆ ಸುಮ್ಮನಿರುವವ ಜಾಣ

**ಸಂಗ್ರಹ**

**ಪಾವನ ೧೦ ಎ**

# ಪ್ರಕೃತಿ ಗೀತೆ





ಧೋ! ಎಂದು ಸುರಿಯಿತು ಮಳೆ
ಮಳೆಯಿಂದ ತಂಪಾಯಿತು ಇಳೆ।
ತೊಳೆಯಿತು ಊರಿನ ಕೊಳೆ
ಊರಿಗೆ ಬಂದಿತ್ತೊಂದು ಕಳೆ॥

ಬಂದಿತು ಊರಿಗೆ ಬರಗಾಲ
ತಂದಿತು ಕಷ್ಟದ ಸೆಕೆಗಾಲ।
ಕೆಟ್ಟಿತು ರೈತರ ಹಣೆಬರಹ
ಬರೆದಿತು ಕಷ್ಟವು ತರತರಹ॥

ಸೂರ್ಯನು ಹೆಚ್ಚಿಸಿದ ತನ್ನಯ ಕೋಪ
ಒಮ್ಮೆಲೆ ಹೆಚ್ಚಿತು ಭೂಮಿಯ ತಾಪ।
ಜನರ ಸ್ಥಿತಿಯು ಅಯ್ಯೋ! ಪಾಪ
ಇದುವೆ ಪ್ರಕೃತಿಯು ನೀಡಿದ ಶಾಪ॥

ಪಾಪವನ್ನರಿತು ನೆಟ್ಟರು ಗಿಡವ
ಎಲ್ಲರು ಉಳಿಸಿ ಎಂದರು ಮರವ।
ಹಾಡಿದರೆಲ್ಲರೂ ಪ್ರಕೃತಿ ಸ್ವರವ
ಪ್ರಕೃತಿ ಕ್ಷಮಿಸಿ ಕೊಟ್ಟಳು ವರವ॥

ಪ್ರಕೃತಿ ನೀನು ಎಷ್ಟು ಚಂದ
ನಿನ್ನಿಂದಾಗಿಯೇ ಭೂಮಿಗೆ ಅಂದ।
ನೀವು ಎಲ್ಲರು ನಿನ್ನಯ ಕಂದ
ಹೀಗೆ ಇರಲಿ ನಮ್ಮಯ ಬಂಧ॥

**ಅನನ್ಯ,**
**೮ ಬಿ**


X A

# ವಿಶೇಷ ಬಹುಮಾನ ಯಾರಿಗೆ

**ಒಂ**ದಾನೊಂದು ಕಾಲದಲ್ಲಿ ಒಂದು ಸಣ್ಣ ಪಟ್ಟಣವಿತ್ತು. ಈ ಸಣ್ಣ ಪಟ್ಟಣದಲ್ಲಿ ಒಂದು ಶಾಲೆಯೂ ಇತ್ತು. ಈ ಶಾಲೆಯ ಮುಖ್ಯೋಪಾಧ್ಯಯರು ಶ್ರೀ ವಿಶ್ವಾನಂದ ಸಾರ್ ಆಗಿದ್ದರು. ಈ ಪಟ್ಟಣದಲ್ಲಿರುವ ಮಕ್ಕಳೆಲ್ಲರೂ ಇದೇ ಶಾಲೆಗೇ ಹೋಗುತಿದ್ದರು. ತನ್ಮಯ್ ಎಂಬ ಒಬ್ಬ ಹುಡುಗನಿದ್ದನು. ಇವನಿಗೆ ತಾಯಿ ಮಾತ್ರವಿರುವುದು. ತನ್ನ ಚಿಕ್ಕ ವಯಸ್ಸಿನಲ್ಲೇ ತನ್ನ ತಂದೆಯನ್ನು ಕಳೆದುಕೊಂಡಿದ್ದ. ತಾಯಿಯು ತನ್ನ ಮಗನನ್ನು ಕಷ್ಟಪಟ್ಟು ಸಾಕುತಿದ್ದಳು. ತನ್ಮಯ್ ಗೆ ಕಲಿಕೆಯಲ್ಲಿ ಬಹಳ ಆಸಕ್ತಿ ಇತ್ತು. ಅವನ ತಾಯಿ ಬಹಳ ಕಷ್ಟಪಟ್ಟು ಅವನನ್ನು ಶಾಲೆಗೆ ಕಳುಹಿಸುತಿದ್ದಳು. ಇವನು ತನ್ನ ತಾಯಿಯ ಹಾಗೆ ಶಾಂತ ಹುಡುಗ. ಯಾರಿಗೂ ತಪ್ಪು ಯೋಚಿಸದೆ ಧರ್ಮರಾಯನ ಹಾಗೆ ಸತ್ಯವಂತ .

ಒಂದು ದಿನ ಶಾಲೆಯಲ್ಲಿ ಅಸಂಬ್ಲಿ ಕರೆದು ' ಮಕ್ಕಳೇ ಈ ವರ್ಷದಲ್ಲಿ ಯಾವ ವಿದ್ಯಾರ್ಥಿಯ ಮನಸ್ಸು ಉತ್ತಮವಾಗಿ ಕಂಡುಬರುತ್ತದೆಯೋ ಆ ವಿದ್ಯಾರ್ಥಿಗೆ ನಾವು ಒಂದು ವಿಶೇಷ ಬಹುಮಾನವನ್ನು ಕೊಡಲಿದ್ದೇವೆ. ಆದ್ದರಿಂದ ನೀವೆಲ್ಲರೂ ತಯಾರಾಗಿರಿ ಎಂದು ಮುಖ್ಯೋಪಾಧ್ಯಾರಾದ ವಿಶ್ವಾನಂದ ಸಾರ್ ವಿಚಾರಿಸಿದರು. ಅದೇ ಸಂಜೆ ಮಕ್ಕಳು ಆಟ ಆಟವಾಡುತ್ತಿರುವಾಗ ಒಬ್ಬ ವಿದ್ಯಾರ್ಥಿ ಬಿದ್ದ. ಆಗ ಕೆಲವು ಮಕ್ಕಳು ಅವನನ್ನು ನೋಡಿ ನಗಾಡಿದರು, ಕೆಲವರು ನೋಡಿ ನಿಂತರು ಆದರೆ ತನ್ಮಯ್ ಓಡಿ ಹೋಗಿ ಅವನನ್ನು ಮೇಲಕ್ಕೆತ್ತಿ ಅಧ್ಯಾಪಕರಬಳಿಗೆ ಕೊಂಡು ಹೋದನು. ಕೈಗೆ ಗಾಯವಾದದನ್ನು ಸ್ವಚ್ಛಗೊಳಿಸಿದನು. ಇವನ ಸಹಾಯ ಕರುಣೆಯ ಈ ಮನೋಭಾವವನ್ನು ಕಂಡು ವಿಶ್ವಾನಂದ ಸರ್ ಗೆ ಬಹಳ ಸಂತೋಷವಾಯಿತು. ಈ ವಿಶೇಷ ಬಹುಮಾನ ಏನೇ ಆದರೂ ತನ್ಮಯ್ ಗೆ ಕೊಡಬೇಕೆಂದು ತೀರ್ಮಾನಿಸಿದರು.

ಒಂದು ದಿನ ತನ್ಮಯಿಯ ಕ್ಲಾಸಿನಲ್ಲಿ ಅಧ್ಯಾಪಕರು ಇಲ್ಲದಿದ್ದುದರಿಂದ ಎಲ್ಲಾ ವಿದ್ಯಾರ್ಥಿಗಳು ಗಲಾಟೆ ಮಾಡುತಿದ್ದರು. ಆದರೆ ತನ್ಮಯಿ ಅವನಷ್ಟಕ್ಕೆ ಕುಳಿತು ಏನೋ ಬರೆಯುತಿದ್ದನು. ಆಗ ವಿಶ್ವಾನಂದ ಸಾರ್ ಬಂದು ಬೇಕು ಬೇಕೆಂದು ತನ್ಮಯ ಏನೂ ಮಾಡದೆ ಇಲ್ಲದಿದ್ದರೂ ಅವನನ್ನು ಕರೆದು ಹೇಳಿದರು ' ತನ್ಮಯ್ .. ನೀನು

ಅಧ್ಯಾಪಕರಿಲ್ಲೆಂದು ಕ್ಲಾಸಲ್ಲಿ ಬೊಬ್ಬೆ ಹಾಕುತಿದ್ದೀಯಾ ..? ಬಾ ಹೊರಗೆ' ಎಂದರು. ತನ್ಮಯ್ ಏನೂ ಮಾತಾಡದೆ ಹೊರಗೆ ಹೋಗಿ ನಿಂತ. ವಿಶ್ವಾನಂದ ಸಾರ್ ಗೆ ಬಹಳ ಖುಷಿ ಆಯಿತು. ಆದರೂ ಅದನ್ನು ತೋರ್ಪಡಿಸದೆ 'ತನ್ಮಯ್ ನೀನೇನು ಮಾಡುತಿದ್ದಿ ಈಗ ?' 'ಸಾರ್ ನ ಬರೆಯುತಿದ್ದೆ ' ಹಾಗಾದರೆ ನಿನ್ನ ತಪ್ಪೇನು ಇಲ್ಲ? ಆದರೆ ನಾನು ನಿನಗೆ ಶಿಕ್ಷೆ ಕೊಟ್ಟಾಗ ಏನು ಹೇಳಿಲ್ಲ ಯಾಕೆ ?' ಆಗ ತನ್ಮಯ್ 'ನನ್ನ ತಾಯಿ ಯಾವಾಗಲೂ ಹೇಳುತ್ತಿದ್ದಳು ' ಯಾವಾಗಲೂ ವಿಧ್ಯೆಯನ್ನು ಹೇಳಿಕೊಟ್ಟ ಗುರುಗಳಿಗೆ ಎದುರುತ್ತರ ಕೊಡಬಾರದು'. ಅಧ್ಯಾಪಕನಿಗೆ ತುಂಬಾ ಖುಷಿ ಆಯಿತು. ಅವನ ಮುಗ್ಧ ಮನಸ್ಸನ್ನು ಎಲ್ಲರೂ ಹೊಗಳಿದರು. ಆ ವರ್ಷದ ಕೊನೆಯಲ್ಲಿ ಆ ಬಹುಮಾನವನ್ನು ತನ್ಮಯಿಗೆ ಕೊಟ್ಟರು. ಅವನು ಬಹಳ ಖುಷಿಯಿಂದ ಸ್ವೀಕರಿಸಿದನು.



ಭಾಗೀರಥಿ

೧೦ ಎ

# ಎರಡು ಗಿ ಳಿಗಳ ಕಥೆ

ಒಂದಾನೊಂದು ಕಾಲದಲ್ಲಿ ಎತ್ತರವಾದ ಮರವೊಂದರ ತುದಿಯಲ್ಲಿ ಒಂದು ಸುಂದರವಾದ ಹೆಣ್ಣು ಗಿಳಿ ವಾಸವಾಗಿತ್ತು. ಅದಕ್ಕೆ ಎರಡು ಪುಟ್ಟ ಅವಳಿ ಜವಳಿ ಗಿಳಿ ಮರಿಗಳಿತ್ತು. ಒಂದು ದಿನ ತಾಯಿ ಗಿಳಿ ಆಹಾರವನ್ನು ಹುಡುಕಿಕೊಂಡು ಆಚೆ ಹೋಗಿದ್ದಾಗ ಒಬ್ಬ ಬೇಟೆಗಾರ ಮರವನ್ನು ಹತ್ತಿ ಗಿಳಿ ಗೂಡನ್ನು ತೆಗೆದು ಕೊಂಡು ಹೋದನು. ಆ ಮರಿಗಳನ್ನು ತನ್ನ ಚೀಲದಲ್ಲಿ ಹಾಕುವಾಗ ಒಂದು ಗಿಳಿಮರಿ ತಪ್ಪಿಸಿಕೊಂಡು ಹಾರಿ ಹೋಗಿತ್ತು. ಇನ್ನೊಂದನ್ನು ಬೇಟೆಗಾರ ತನ್ನ ಮನೆಗೆ ತೆಗೆದುಕೊಂಡು ಹೋದನು. ಅದೇ ದಾರಿಯಲ್ಲಿ ಹೋಗುತಿದ್ದ ಸಾಧು ಒಬ್ಬ ಗಿಳಿ ತಪ್ಪಿಸಿಕೊಂಡದ್ದನ್ನು ನೋಡಿ ಅದನ್ನು ಹಿಡಿದು ತನ್ನ ಆಶ್ರಮಕ್ಕೆ ತೆಗೆದುಕೊಂಡು ಹೋದನು. ಹೀಗೆ ಒಂದು ಗಿಳಿ ಮರಿ ಬೇಟೆಗಾರನ ಕೈಯಾಲ್ಲೂ ಇನ್ನೊಂದು ಗಿಳಿ ಮರಿ ಸಾಧುವಿನ ಕೈಯಾಲ್ಲೂ ಇದ್ದವು.

ಒಂದು ದಿನ ಒಬ್ಬ ಮಹಾರಾಜ ಕಾಡಿನ ಮೂಲಕ ಪ್ರಯಾಣ ಹೋಗುತ್ತಿರುವಾಗ ಬೇಟೆಗಾರನ ಮನೆ ನೋಡಿ ತನ್ನ ಕುದುರೆಯನ್ನ ಬೇಟೆಗಾರನ ಮನೆ ಹತ್ತಿರ ನಡೆಸಿದನು. ಇದನ್ನು ನೋಡಿದ ಗಿಳಿ ' ನಮ್ಮ ಮನೆಗೆ ಒಬ್ಬ ಮನುಷ್ಯ ಬರುತ್ತಿದ್ದಾನೆ .. ಒಡೆಯ, ನಿನ್ನ ಬಿಲ್ಲು ಬಾಣದಿಂದ ಆತನನ್ನು ಹೊಡೆದು ಸಾಯಿಸು ಬೇಗ ' ಎಂದು ಕಿರಿಚಿತು. ಇದು ಮಹಾರಾಜನಿಗೆ ಕೇಳಿಸಿತು. ಹಾಗೆ ಕೂಗಿದ್ದು ಪಂಜರದಲ್ಲಿ ಇದ್ದ ಗಿಳಿ ಎಂದು ರಾಜನಿಗೆ ತಿಳಿಯಿತು.

ಆಗ ಮಹಾರಾಜ ' ಛೆ! ಇದೆಂತ ಅಭ್ಯಾಸದ ಪಕ್ಷಿ .. ಆದರೆ ಇದರ ಒಡೆಯ ಹೇಗೆ ಇರಬಹುದು ಎಂದು ಯೋಚಿಸುತ್ತಾ ರಾಜ ತನ್ನ ಪ್ರಯಾಣ ಮುಂದುವರಿಸಿದ. ಹೀಗೆ ಹೋಗುತ್ತಿದ್ದಂತೆ ರಾಜನಿಗೆ ಬಾಯಾರಿಕೆ ಆಯಿತು. ಅಲ್ಲಿ ಹತ್ತಿರದಲ್ಲಿ ಆಶ್ರಮ ಕಂಡಿತು. ಅಲ್ಲಿ ಇಳಿದು ನೀರು ಕುಡಿಯಲು ಹೋದ. ರಾಜನ ಕಣ್ಣಿಗೆ ಪಂಜರದ ಒಳಗೆ ಇರುವ ಗಿಳಿ ಕಾಣಿಸಿತು. ರಾಜನಿಗೆ ಪಕ್ಕನೆ ತಾನು ಮೊದಲು ಕಂಡ ಗಿಳಿಯ ನೆನಪಾಯಿತು. ಈ ಗಿಳಿ ತನ್ನನು ಹೇಗೆ ಹೇಳುತ್ತದೆಯೋ ಎಂದು ರಾಜನಿಗೆ ಸಂಕಟ ಆಗಲಾರಂಭಿಸಿತು. ಆದರೆ ಆ ಗಿಳಿ ' ಸುಸ್ವಾಗತ ಮಹಾರಾಜರೇ .. ನಮ್ಮ ಮನೆಗೆ ನಿಮ್ಮನು ಸ್ವಾಗತಿಸುತ್ತೇನೆ.. ಬನ್ನಿ.. ನಿಮ್ಮ ಆಗಮನವು ನಮ್ಮ ತುಂಬಾ ಸಂತೋಷಗೊಳಿಸುತ್ತದೆ' ಎಂದು ಮಹಾರಾಜನನ್ನು ಹೊಗಳಲು ಆರಂಭಿಸುತ್ತದೆ. ಇದನ್ನು ಕೇಳಿ ರಾಜನಿಗೆ ತುಂಬಾ

ಸಂತೋಷವಾಯಿತು. ಬೇಟೆಗಾರನ ಮನೆಯಲ್ಲಿ ನೋಡಿದ ಗಿಳಿಯು ಇಲ್ಲಿಯು ಕಂಡ ಗಿಳಿಯ ಬಗ್ಗೆ ಆಲೋಚಿಸುತ್ತಾನೆ. ಬೇಟೆಗಾರನ ಮನೆಯಲ್ಲಿ ದುಷ್ಟತನ ಮನಸ್ಸು ಹೊಂದಿದ್ದ ಗಿಳಿ ಹಾಗೂ ಎಲ್ಲಿ ಸಾಧು ಮನಸ್ಸನ್ನು ಹೊಂದಿದ್ದ ಗಿಳಿ ಎಂದು ಮಹಾರಾಜನು ತನ್ನಲ್ಲೆ ಗುಣುಗುಟ್ಟುತಿದ್ದ. ರಾಜನು ಗಿಳಿಯತ್ತ ಹೋಗಿ ' ಮುದ್ದಿನ ಗಿಳಿಯೇ ನಿನ್ನಂತ ಸ್ನೇಹಪರವಾದ ಪಕ್ಷಿಯನ್ನು ನೋಡಿ ನನಗೆ ತುಂಬಾ ಸಂತೋಷವಾಗುತ್ತಿದೆ. ನಿನ್ನಂತ ಇನ್ನೊಂದು ಪಕ್ಷಿಯನ್ನು ನಾ ಆಗ ಕಂಡೆ ಆದರೆ ಆ ಪಕ್ಷಿಯ ಮನಸ್ಸು ತುಂಬಾ ಸಂಕುಚಿತ. ಅದು ಮನೆಗೆ ಬಂದ ಅಪರಿಚಿತರನ್ನು ಕೆಟ್ಟದಾಗಿ ನುಡಿಯುತ್ತದೆ ' ಎಂದ. ಇದನ್ನು ಕೇಳಿ ಗಿಳಿ 'ಅದು ಬೇಟೆಗಾರನ ಬಳಿ ಇತ್ತೇ..?' ಕೇಳಿತು. ಆಗ ಮಹಾರಾಜ ' ಹೌದು ಬೇಟೆಗಾರನ ಬಳಿ ಇರುವ ಗಿಳಿ. ಅದು ನಿನಗೆ ಹೇಗೆ ತಿಳಿಯಿತು? ಎಂದು ರಾಜ ಪ್ರಶ್ನಿಸಿದ. ಆ ಸಮಯ ಗಿಳಿ ಕಣ್ಣೀರು ಸುರಿಸುತ್ತಾ 'ಅವನು ನನ್ನ ಪ್ರೀತಿಯ ಸಹೋದರ ನಾವಿಬ್ಬರು ಒಂದೇ ಗೂಡಲ್ಲಿ ಇದ್ದೆವು. ನಮ್ಮ ಅಮ್ಮ ಒಂದು ದಿನ ಆಹಾರಕ್ಕಾಗಿ ಹೊರಗೆ ಹೋದಾಗ ನಮ್ಮನು ಬೇಟೆಗಾರ ಹಿಡಿದು ಕೊಂಡು ಹೋದ.. ಆದರೆ ನಾ ಅವನ ಕೈಯಿಂದ ತಪ್ಪಿಸಿ ಕೊಂಡೆ ಆದರೆ ನನ್ನ ಸಹೋದರನಿಗೆ ಅವನಿಂದ ತಪ್ಪಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಬೇಟೆಗಾರ ತುಂಬಾ ನೀಚನಾದ್ದರಿಂದ ನನ್ನ ಸಹೋದರನ ಸ್ವಭಾವ ಅದೇ ರೀತಿಯಾಗಿಹೋಯಿತು. ಆದರೆ ನನ್ನ ಒಡೆಯ ತುಂಬಾ ವಿಭಿನ್ನ , ಉತ್ತಮ ಪಾತ್ರದಾರಿ ಆದ್ದರಿಂದ ನನ್ನ ಸ್ವಭಾವವು ಈ ರೀತಿ ಆಯಿತು' ಎಂದು ರಾಜನ ಬಳಿ ಗಿಳಿ ಹೇಳಿತು. ಗಿಳಿಯ ಮಾತಿನಿಂದ ಸಂತೋಷ ಗೊಂಡ ರಾಜ ಆ ಗಿಳಿ ಅವನ ಒಡೆಯ ಮತ್ತು ಆಶ್ರಮವನ್ನು ಹೊಗಳುತ್ತಾ ಅಲ್ಲಿಂದ ಹೊರಬಂದನು.

' ಒಳ್ಳೆಯವರ ಸಹವಾಸದಿಂದ ಒಳ್ಳೆಯತನವೇ ಕಂಡುಬರುತ್ತದೆ '



ಚಿತ್ರ ೧೦ ಎ

## Beautiful Butterfly



Butterfly Butterfly
Colour Colour Butterfly
Flying here there
Taking Nectar from Flowers
Butterfly Butterfly beautiful
Butterfly

## My Dog

Dog, Dog good Dog
Tomy is My Dog
Dog guard our home
Black Gray colour Dog
Dog ,Dog Barking Dog
Dog, Dog good Dog



**Sumukha S Holla**

# ಓದಿನ ಮಹತ್ವ

**ಓ**ದು ಎಂದರೆ ಕತ್ತಲೆಯಿಂದ ಬೆಳಕಿನೆಡೆಗೆ ಒಯ್ಯುವಂತಹ ಒಂದು ದಾರಿದೀಪವಾಗಿದೆ. **"ಓದಿಲ್ಲದ ಮನೆ ಆತ್ಮವಿಲ್ಲದ ದೇಹದಂತೆ"**. 'ನೀರಿಗೆ ನೈದಿಲೆಯೆ ಶೃಂಗಾರ ಎಂಬಂತೆ ಮಾನವನಿಗೆ ಓದುವೇ ಶೃಂಗಾರ'. ಉತ್ತಮವಾದ ಓದುವೇ ಧರ್ಮಮಾರ್ಗಕ್ಕೆ ದಾರಿದೀಪಗಳು ಹಾಗೂ ಅವುಗಳೇ ಜ್ಞಾನದ ನಿಧಿ. ಓದಿದಾಗ ದೊರೆಯುವ ತಿಳುವಳಿಕೆಯಿಂದ ಮನೆಮಂದಿಯಲ್ಲಾ ಸಂಸ್ಕೃತಿ ಸಂಪನ್ನರಾಗಿ ಬದುಕೂದರಲ್ಲಿ ಯಾವ ಸಂದೇಹವಿಲ್ಲ. ಇದು ನಿತ್ಯ ಕಾಣುವ ಸತ್ಯವಾಗಿದೆ.

ರಾಮಾಯಣ ಮಹಾಭಾರತದಂತಹ ಗ್ರಂಥಗಳು ನಮಗೆ ಧರ್ಮಮಾರ್ಗವನ್ನು ತಿಳಿ ಹೇಳಿದರೆ , ಜನಪದ, ವಚನ, ದಾಸ ಸಾಹಿತ್ಯದ ಗ್ರಂಥಗಳು ಲೋತದ ಅನುಭವವನ್ನು, ಭಕ್ತಿ ಮಾರ್ಗವನ್ನು ತಿಳಿ ಹೇಳುತ್ತದೆ. ಕಾದಂಬರಿಗಳ ತಿರುಳು ನಮ್ಮನ್ನು ಚಿಂತನಶೀಲರನ್ನಾಗಿಸುತ್ತದೆ. ಮಾತ್ರವಲ್ಲದೇ ಮತ್ತೆ ಮತ್ತೆ ಓದುವಂತೆ ಮಾಡುತ್ತದೆ. ಇವು ಅಮೂಲ್ಯವಾದ ರತ್ನಗಳು ಇದ್ದಂತೆ.

ಓದುವುದು ಜನರಲ್ಲಿ ಹೊಣೆಗಾರಿಕೆಯ ಅರಿವನ್ನುಂಟುಮಾಡುತ್ತದೆ. ಓದು ನಮ್ಮ ಚಿತ್ತವನ್ನು ಆದರ್ಶದತ್ತ ಕರೆದೊಯ್ಯುತ್ತಲೆ ಬಾಳಿಗೆ ಬೆಳಕನ್ನು , ಜೀವಕ್ಕೆ ಹೊಳಪನ್ನು ನೀಡುವಂತವುಗಳಾಗಿವೆ. ಒಳ್ಳೆಯ ಮಹಾವೀರರ, ಸ್ವಾತಂತ್ರ್ಯ ಹೋರಾಟಗಾರರ ಕಥೆಗಳನ್ನು ಓದುದರಿಂದ ಅವರಲ್ಲಿರುವ ಧೈರ್ಯ ಸಾಹಸ ನಮ್ಮಲ್ಲಿಯೂ ಬರುವಂತಾಗುತ್ತದೆ.ದಿನಪತ್ರಿಕೆಗಳನ್ನು ಓದುದರಿಂದ ದಿನ ದಿನದ ವಿಷಯಗಳು ನಮಗೆ ತಿಳಿಯಲ್ಪಡುತ್ತದೆ. ಓದುದರಿಂದ ನಮ್ಮ ಬುದ್ಧಿಶಕ್ತಿಯೂ ಹೆಚ್ಚಾಗುತ್ತದೆ. ಓದಿನ ಮಹತ್ವ ಎಷ್ಟು ಬರೆದರು ಸಾಲದು. ಶಾಸ್ತ್ರ ಗ್ರಂಥಗಳು ,ಲಕ್ಷಣ ಗ್ರಂಥಗಳು, ಇತಿಹಾಸದ ಪುಸ್ತಕಗಳು, ಸಂಶೋಧನ ಪ್ರಬಂಧಗಳು ನಾಡಿನ ಜ್ಞಾನ ಸಂಪತ್ತು ಎನಿಸಿ ಜ್ಞಾನ ದೀವಿಗೆ ಆಗಿವೆ.

**ಓದಿಲ್ಲದವರ ಬದುಕು ಹದ್ದಿಗಿಂತ ಕಡೆ**

**ಓದುವೇ ಜ್ಞಾನದ ಜ್ಯೋತಿ**




ಅನನ್ಯ
೮ ಬಿ

# ಚಿತ್ರ ರಚನೆ



# ನನ್ನಮ್ಮ

ಅಮ್ಮ ನನ್ನಮ್ಮ
ಓ ಅಮ್ಮ ನನ್ನಮ್ಮ
ಈ ಉಸಿರೇ ನೀನಾದೆ
ಈ ಉಸಿರಲಿ ಬೆರೆತೊದೆ
ಈ ಜೀವಕೆ ನೆರಳಾದೆ
ಅಮ್ಮ ನನ್ನಮ್ಮ
ಈ ಜೀವವೇ ನೀನಾದೆ
ನೀ ನೀಡಿದ ಈ ಜನ್ಮದಿ
ನಿನ ಋಣವನು ನಾ ತೀರಿಸುವೆನು ನಾನಮ್ಮ
ಅಮ್ಮ ನನ್ನಮ್ಮ
ಓ ಅಮ್ಮ ನನ್ನಮ್ಮ




ಬಿಂದಿಯಾ
10 ಎ


# ಮಾವ ತಂದು ಕೊಟ್ಟ ಕಾರು

**ಒ**ಮ್ಮೆ ಅತ್ತೆಯೊಬ್ಬಳಿಗೆ ಅಳಿಯಂದಿರಿಗೆ ತನ್ನ ಮೇಲಿರುವ ಪ್ರೀತಿ ಎಷ್ಟು ಎಂಬುದನ್ನು ಪರೀಕ್ಷಿಸುವ ಮನಸ್ಸಾಯಿತು ಕೂಡಲೇ ಆಕೆ ಮನೆಯ ಪಕ್ಕದಲ್ಲಿದ್ದ ಬಾವಿಗೆ ಜಿಗಿದು ಬಿಟ್ಟಳು .ಅಲ್ಲೇ ಕುಳಿತಿದ್ದ ಅಳಿಯಂದಿರು ಇದನ್ನು ನೋಡಿ ಓಡಿ ಬಂದರು .

ಮೊದಲನೆಯ ಅಳಿಯ ಬಾವಿಗೆ ಹಾರಿ ಆಕೆಯನ್ನು ಕಾಪಾಡಿದ .ಹಿರಿಹಿರಿ ಹಿಗ್ಗಿದ ಅತ್ತೆ ಅವನಿಗೆ ಒಂದು ಕಾರನ್ನು ಬಹುಮಾನವಾಗಿ ಕೊಟ್ಟಳು .ಅಳಿಯನಿಗೆ ಸಂತೋಷವಾಯಿತು ಎರಡನೆಯ ದಿನ ಪರೀಕ್ಷೆ ಮುಂದುವರಿಸಲು ಮತ್ತೆ ಬಾವಿಗೆ ಹಾರಿದಳು .ಈ ದಿನ ಎರಡನೆಯ ಅಳಿಯನು ಬಂದು ಅತ್ತೆಯನ್ನು ಬದುಕಿಸಿದ .ಮನಸ್ಸು ತುಂಬಿ ಅತ್ತೆ ಒಂದು ಬೈಕ್ ನ್ನು ಬಹುಮಾನವಾಗಿ ಕೊಟ್ಟಳು .

ಇನ್ನು ಮೂರನೆಯ ಅಳಿಯನನ್ನು ಪರೀಕ್ಷಿಸುವ ಸಲುವಾಗಿ ಮೂರನೆಯ ದಿನಪುನಃ ಬಾವಿಗೆ ಹಾರಿದಳು .ಆದರೆ ಅಳಿಯನು ಬಾವಿಗೆ ಜಿಗಿದು ಅತ್ತೆಯನ್ನು ರಕ್ಷಿಸಬೇಕೆಂದುಕೊಳ್ಳುವಷ್ಟರಲ್ಲಿ ಅಂದುಕೊಂಡ ಇನ್ನು ಮನೆಯಲ್ಲಿ ಬಾಕಿ ಉಳಿದಿರುವುದು ಹಳೆಯ ಸೈಕಲ್ ಅಷ್ಟೇ .ಡಬ್ಬ ಸೈಕಲ್ ಗಾಗಿ ಯಾಕೆ ಕಷ್ಟಪಡಬೇಕು ಎಂದು ಯೋಚಿಸಿದವನೇ ಸುಮ್ಮನಾದ.ಅತ್ತೆ ತೀರಿ ಹೋದಳು .

ಆದರೆ **.......**ಮರುದಿನ ಮೂರನೆಯ ಅಳಿಯನಿಗೆ ಮರ್ಸಿಡೆಸ್ ಕಾರ್ ದೊರಕಿತು **...***ಹೇಗೆ ಗೊತ್ತ?????* ಮಾವ ತಂದು ಕೊಟ್ಟ **......***!!!!!!!!!*




ಯಾವುದಕ್ಕೂ ಯೋಗ ಬೇಕು .

ವರುಣ್ ರಾಜ್

೧೦ ಎ

# ಜಲ ಚಿತ್ರ



ಶಿಬಿಲಿ

೧೦ ಎ

# എന്റെ ബാല്യം

ഓർക്കുന്നു ഞാനിന്നും ഓർക്കുന്നു
ഒരിക്കലും മറക്കാത്ത എന്റെ ബാല്യം
ഓർക്കുന്നു ഞാൻ ഓർക്കുന്നു
ഒരിക്കലും മറക്കാത്ത എന്റെ ബാല്യം
മഴയത്ത് കളിച്ചധും വെയിലത്തു
പോയതും
കൂട്ടുകാരോടൊപ്പ ഇരുന്നതും
മഴയത്ത് കളിച്ചതും വെൽത്തിരുന്നതും
കൂട്ടുകാരോടൊപ്പം ഇരുന്നതും
ആഡിയും പാടിയും എന്നൊപ്പമിരുന്ന
കൂട്ടുകാരെ ഞാൻ ഓർക്കുന്നു
എത്ര സുന്ദരം ....
എത്ര മനോഹരം .....
എൻ ജീവിതത്തിലെ നല്ലകാലം
എൻ ഓർമയിലെ മധുരകാലം
എൻ ജീവിതത്തിലെ സുവർണകാലം
എൻ ഓർമയിലെ സ്നേഹകാലം ....



**ദീപശ്രീ**

# ಹಾಸ್ಯ ಚಟಾಕಿ

ತಂದೆ : Result ಏನಾಯಿತೋ?

ಮಗ : ಹೆಡ್ ಮಾಸ್ಟರ್ ಮಗನು ಕೂಡ ಫೈಲ್ ಆಗಿದ್ದಾನೆ...

ತಂದೆ : ನೀನು

ಮಗ : ಡಾಕ್ಟರ್ ಮಗನೂ ಫೈಲ್...

ತಂದೆ : ನಿನ್ನ Result ಏನಾಯಿತು...

ಮಗ :ಲಾಯರ್ ಮಗನೂ ಫೈಲ್..



ತಂದೆ : ನಿನ್ನ Result ಏನಾಯಿತು ಬೊಗಳು..

ಮಗ :ನೀನೇನು Super Star Rajinikanth

ಅಂದುಕೊಂಡಿದ್ದೀಯ, ನಿನ್ನ ಮಗನು ಫೈಲ್.....!!!

***************************



ಹೆಂಡತಿ : ರೀ....ಏನ್ ಮಾಡುತ ಇದ್ದೀರಾ ?

ಗುಂಡ : ನೊಣ ಹೊಡೀತಾ ಇದ್ದೀನಿ....

ಹೆಂಡತಿ : ನೊಣಗಳು ಸಿಕ್ಕಿದವ..

ಗುಂಡ : ಹೂಂ.... 3 ಗಂಡು, 2 ಹೆಣ್ಣು ನೊಣಗಳನ್ನು ಸಾಯಿಸಿದಿನೀ..

ಹೆಂಡತಿ : ನೊಣಗಳನ್ನು .... 3 ಗಂಡು, 2 ಹೆಣ್ಣು ಅಂಥ ಹೇಗೆ ಹೇಳ್ತಿರಾ?

ಗುಂಡ : ತುಂಬಾ ಸುಲಭ....,

3 ನೊಣ.. Beer bottle ಮೇಲೆ ಕುಳಿತಿದ್ದವು...

2 ನೊಣ.. Phone ಮೇಲೆ ಕುಳಿತಿದ್ದವು.

**************************

ಟೀಚರ್ : ಪ್ರಪಂಚದಲ್ಲಿ ಒಟ್ಟು ಎಷ್ಟು ದೇಶಗಳಿವೆ

ಗುಂಡ : ಪ್ರಪಂಚದಲ್ಲಿರುವುದು ಒಂದೇ ದೇಶ ಭಾರತ ಮಾತ್ರ ,

**ಉಳಿದವೆಲ್ಲವೂ ವಿದೇಶಗಳು.**


*ಅನನ್ಯ ,೮ ಬಿ*


# *My Mother*





*Mom, from the time I was really young*
*I realised I had someone*
*who always called*
*who always protected me.*
*Who was always ther for me no matter what*
*you thought me right from wrong*
*and pushed me to do the right thing*
*even when I was hard to do*
*you took care of me when I was sick.*
*And your love helped make me well.*
*You had rules,*
*And I learned that when i obeyed there.*
*My life was simple, better and riches.*
*You were and you are,*
*my guiding light of my life.*
*My heart is filled will love four you.*
*My teacher, my friend, my lovely Mother.*

## ವರ್ಣರಂಜಿತ ಆಕೃತಿಗಳು







# ಗೆಳೆತನ

**ಒಂ**ದು ಊರಿನಲ್ಲಿ ಮನು ಎನ್ನುವ ಒಬ್ಬ ಹುಡುಗನಿದ್ದನು. ಅವನು ಮೈಸೂರಿನಲ್ಲಿ ಕಲಿಯುತ್ತಿದ್ದ ಮಾತ್ರವಲ್ಲದೇ ಕಲಿಕೆಯಲ್ಲಿ ಮುಂದಿದ್ದ. ಮೈಸೂರಿನ ಒಂದು ಶಾಲೆಯಲ್ಲಿ ಏಳನೇ ತರಗತಿಯಾದ ನಂತರ ಅವನು ಬೆಂಗಳೂರಿನಲ್ಲಿ ಕಲಿಯಲು ಒಂದು ಒಳ್ಳೆಯ ಶಾಲೆಯನ್ನು ಹುಡುಕಿ ಆ ಶಾಲೆಗೆ ಸೇರಿದನು. ಅವನ ಆ ಶಾಲೆಯಲ್ಲಿ ರೋಹಿತ್ ಎನ್ನುವ ಒಬ್ಬ ಹುಡುಗನಿದ್ದನು. ಅವನು ಆ ಶಾಲೆಯಲ್ಲೇ ಹಿಂದಿನಿಂದ ಕಲಿತುಕೊಂಡು ಬರುತ್ತಿದ್ದ , ಈಗ ಕೂಡ ಕಲಿಯುವುದರಲ್ಲಿ ಮುಂದಿದ್ದ . ಮನು ಬಂದ ಮೇಲೆ ಅವನು ಕಲಿಯುವುದರಲ್ಲಿ ಹಿಂದೆ ಬಿದ್ದ. ಅವನಿಗೆ ಮನುವನ್ನು ಕಂಡರೆ ಆಗುತಿರಲಿಲ್ಲ. ಮನುವಿಗೆ ಹೊಡೆಯುವುತ್ತಿದ್ದ, ಹಾಗೆಯೇ ಮನುವನ್ನು ಯಾವ ಆಟಕ್ಕೂ ಸೇರಿಸುತ್ತಿರಲಿಲ್ಲ ಮತ್ತು ರೋಹಿತ್ ಹೇಳಿದ ಹಾಗೆಯೇ ಮನುವು ಕೇಳಬೇಕಿತ್ತು.



ಒಂದು ದಿನ ರೋಹಿತ್ ಅವನ ಗೆಳೆಯರನ್ನು ಅವನ ಮನೆಯ ಹತ್ತಿರದ ನದಿಗೆ ಕರೆದುಕೊಂಡು ಹೋದ. ಅಲ್ಲಿ ಅವರೆಲ್ಲರೂ ತುಂಬಾ ಆಡುತಿದ್ದರು. ಹೀಗೆ ಆಡುತಿದ್ದಂತೆ ರೋಹಿತ್ ನೀರಿನಲ್ಲಿ ಮುಳುಗಿದ. ಆಗ ಅವನ ಗೆಳೆಯರು ಅವನು ಮುಳುಗುದನ್ನು ನೋಡಿ ಓಡಿಹೋದರು. ಆಗ ಮನು ಅದೇ ದಾರಿಯಲ್ಲಿ ಹೋಗುತಿದ್ದ. ಆಗ ಯಾರೋ ನೀರಿನಲ್ಲಿ ಮುಳುಗುವ ಶಬ್ದ ಕೇಳಿತು. ಅವನು ಓಡಿಹೋಗಿ ನೋಡಿದ. ಯಾರೋ ಮುಳುಗುದನ್ನು ಕಂಡು ಅವನನ್ನು ರಕ್ಷಣೆ ಮಾಡಲು ಏನೂ ನೋಡದೆ ನದಿಗೆ ಹಾರಿದ. ಆಗ ಅವನಿಗೆ ಕಲ್ಲು ತಾಗಿ ರಕ್ತ ಬರುತಿತ್ತು. ಆದರೂ ಮನು ರೋಹಿತನ್ನು ಎತ್ತಿ ಆಸ್ಪತ್ರೆಗೆ ಕೊಂಡು ಹೋದ. ಆಮೇಲೆ ರೋಹಿತನ ಮನೆಗೆ ಫೋನ್ ಮಾಡಿ ವಿಷಯ ತಿಳಿಸಿದ. ರೋಹಿತ್ ಗೆ ರಕ್ತ ಬೇಕೆಂದು ಆಸ್ಪತ್ರೆಯಲ್ಲಿ ಹೇಳಿದರು. ಆದರೆ ರೋಹಿತನ ರಕ್ತಕ್ಕೆ ಯಾರ ರಕ್ತವು ಹೊಂದುತ್ತಿರಲಿಲ್ಲ. ಆದರೆ ಮನುವಿನ ರಕ್ತಕ್ಕೆ ರೋಹಿತ್ ನ ರಕ್ತವು ಹೊಂದುತ್ತಿತ್ತು. ಮನು ರೋಹಿತಿಗೆ ರಕ್ತ ಕೊಟ್ಟು ಅವನನ್ನು ಕಾಪಾಡಿದ.ಹೀಗೆ ಕೆಲವು ದಿನಗಳು ಕಳೆದವು. ರೋಹಿತ್ ತನ್ನ ಆರೋಗ್ಯವನ್ನು ಪುನ್ಹ ಪಡೆದು ಶಾಲೆಗೆ ಬರಲು ಆರಂಭಿಸಿದ. ಆದರೆ ಅಂದಿಂದ ಮನು ಮತ್ತು ರೋಹಿತ್ ತುಂಬಾ ಗೆಳೆತನವನ್ನು ಬೆಳೆಸಿದರು.

**ತ್ರಿಶ , ೮ ಬಿ**

# ಸಹಾಯದ ಅವಶ್ಯಕತೆ

**ಈ** ಪ್ರಕೃತಿಯು ಬಲು ಸುಂದರವಾಗಿದೆ .ನಾವೆಲ್ಲರೂ ಭೂತಾಯಿಯ ಮಕ್ಕಳು .ಪ್ರತಿಯೊಂದು ಜೀವ ಸಂಕುಲವು ಈ ಭೂಮಿಯಲ್ಲಿ ಹುಟ್ಟಬೇಕಾದರೆ ತುಂಬಾ ಪುಣ್ಯ ಮಾಡಿರಬೇಕು. ಅದರಲ್ಲೂ ಮನುಷ್ಯರು ,ಯಾಕೆಂದರೆ ಪ್ರಾಣಿ ಪಕ್ಷಿಗಳಿಗಿಂತ ಹೆಚ್ಚಿನ ಶಕ್ತಿಯನ್ನೇ ದೇವರು ಮನುಷ್ಯನಿಗೆ ಕರುಣಿಸಿದ್ದಾನೆ . ಆದರೆ ಮನುಷ್ಯ ತುಂಬಾ ಸ್ವಾರ್ಥಿ .'ಪರೋಪಕಾರಂ ಇದಂ ಶರೀರಂ 'ಎಂಬ ಮಾತಿನಂತೆ .ಇದರ ಅರ್ಥವೇನೆಂದರೆ ನಾವು ಈ ಭೂಮಿಯಲ್ಲಿ ಹುಟ್ಟಿರುದೇ ಕಷ್ಟದಲ್ಲಿರುವವರಿಗೆ ನಮ್ಮ ಕೈಲಾದ ಮಟ್ಟಿಗೆ ಸಹಾಯ ಮಾಡಲು ಎಂಬುದೇ ಇದರ ತಿರುಳಾಗಿದೆ .

ಆದರೆ ಈಗಿನ ಜನಗಳು ಹಾಗಲ್ಲ ಒಂದು ರಸ್ತೆಯಲ್ಲಿ ಯಾರಿಗಾದರೂ ಅಪಘಾತ ಸಂಭವಿಸಿ ಅವರಿಗೆ ಜೋರಾಗಿ ಏಟು ಬಿದ್ದು ಮೈಯಲ್ಲಾ ರಕ್ತ ಹರಿಯುತ್ತಿದರೂ ಹತ್ತಿರವಿದ್ದಂತಹ ಜನ ಅವರನ್ನು ತಕ್ಷಣ ಆಸ್ಪತ್ರೆಗೆ ತಲುಪಿಸುದು ಬಿಟ್ಟು ಮೊಬೈಲ್ ನಲ್ಲಿ ಸೆಲ್ಫಿ ,ಫೋಟೋ ,ವಿಡಿಯೋ ತೆಗೆದು ವಾಟ್ಸಪ್ ,ಫೇಸ್ ಬುಕ್ ಗಳಲ್ಲಿ ಹಾಕುತ್ತಾರೆ. ಅಷ್ಟರಲ್ಲಿ ಆ ವ್ಯಕ್ತಿಯ ಜೀವವೇ ಹೋಗಿರುತ್ತದೆ .



ಪ್ರಾಣಿ ಪಕ್ಷಿಗಳಿಗಿದ್ದಷ್ಟು ಕರುಣೆ ಮಾನವನಿಗಿಲ್ಲ. ಉದಾಹರಣೆ ಶ್ವಾನ (ನಾಯಿ )ಅದಕ್ಕೆ ಮೂರು ಹೊತ್ತು ಊಟ ಹಾಕಿದರೆ ಅದು ಬದುಕಿದ್ದಷ್ಟು ದಿನ ನಮ್ಮನ್ನು ಮರೆಯುವುದಿಲ್ಲ ಹಾಗೂ ನಮ್ಮ ಮನೆಯಿರುವಷ್ಟು ದಿನ ನಮ್ಮ ಮನೆಯನ್ನು ಕಾಯುತ್ತದೆ. ಯಾಕೆಂದರೆ ಅದಕ್ಕೆ ತಮ್ಮ ಮನೆಯವರ ಮೇಲೆ ಅಷ್ಟು ಪ್ರೀತಿ ನಂಬಿಕೆ ಇದೆ . ಆದರೆ ಪ್ರಾಣಿ ಪಕ್ಷಿಗಿದ್ದಷ್ಟು ಒಳ್ಳೆಯ ಗುಣ ಮನುಷ್ಯನಿಗಿಲ್ಲ. ಈ ಕಾರಣಕ್ಕಾಗಿಯೇ ಮನುಷ್ಯ ತುಂಬಾ ಸ್ವಾರ್ಥಿ ಎನ್ನಲಾಗಿದೆ .ಈ ಪ್ರಪಂಚದಲ್ಲಿ ನನಗೆ ಯಾರ ಸಹಾಯವೂ ಬೇಡ ನಾನೊಬ್ಬನೇ ಬದುಕುತ್ತೇನೆ ಎಂದರೆ ಅದು ಖಂಡಿತವಾಗಿಯೂ ಸಾಧ್ಯವಿಲ್ಲ . ಪ್ರತಿಯೊಬ್ಬ ಮನುಷ್ಯನಿಗೂ ಇನ್ನೊಬ್ಬ ಮನುಷ್ಯನ ಸಹಾಯ ಬೇಕೇ ಬೇಕು . ಉದಾಹರಣೆಗೆ ಬಟ್ಟೆ ತಯಾರಿಸುವುದು .ನಮಗೆ ಒಂದು ಬಟ್ಟೆ ಬೇಕಾದರೆ ಅದರ ಹಿಂದೆ ಹಲವು ಕೈಗಳ ಸಹಾಯವಿರಬೇಕು. ಮೊದಲಿಗೆ ರೈತನು ಹತ್ತಿಯನ್ನು ಬೆಳೆಸಿ ಆ ಹತ್ತಿಯನ್ನು ಬಟ್ಟೆ ತಯಾರಿಸುವ ಫ್ಯಾಕ್ಟರಿಗೆ ಮಾರಿ ,ಆ ಅಂಗಡಿಯವರು ಅದನ್ನು ನೂಲಿನ

ರೀತಿಯಲ್ಲಿ ಮಾರ್ಪಡಿಸಿ ,ಅದನ್ನು ಬಟ್ಟೆಯ ರೀತಿಯಲ್ಲಿ ಮಾಡಿ ,ಹೊಲಿಯುವ ಅಂಗಡಿಗೆ ಕೊಟ್ಟು ಅವರು ಅದನ್ನು ಹೊಲಿದಾಗ ಮಾತ್ರ ಬಟ್ಟೆ ತಯಾರಾಗುತ್ತದೆ .

ಈ ರೀತಿಯಲ್ಲಿ ಒಂದು ಕೆಲಸವಾಗಬೇಕಾದರೆ ಅದರ ಹಿಂದೆ ಹಲವು ಕೈಗಳು ಕೆಲಸಮಾಡುತ್ತಿರುತ್ತದೆ. ಆದುದರಿಂದ 'ನಾವೆಲ್ಲರೂ ಒಂದೇ 'ಎಂಬ ಭಾವನೆ ಇಟ್ಟುಕೊಂಡು ಕಷ್ಟದಲ್ಲಿರುವವರಿಗೆ ನಮ್ಮ ಕೈಲಾದ ಮಟ್ಟಿಗೆ ಸಹಾಯ ಮಾಡಿಕೊಂಡು ಮುನ್ನಡೆಯೋಣ .

**ಅನನ್ಯ ಯು**

||||||||||||||||||||||||||||||||||||||||||||||||||||||||||||||||||||||||||||||||||||

**ಹನಿಗವನ**

## ಬಣ್ಣದ ಚಿಟ್ಟೆ



ಬಾ ಬಾ ಚಿಟ್ಟೆ
ಬಣ್ಣದ ಚಿಟ್ಟೆ
ಅಂದದ ಹೂವಿಗೆ ಮುತ್ತಿಗೆ ಹಾಕಿ
ಹಾರಾಡುವ ಚಂದದ ಚಿಟ್ಟೆ
ಹೂವಿಂದ ಹೂವಿಗೆ ಹಾರುತಲಿರುವ
ನಿನ್ನನು ನೋಡಲು ಬಲು ಅಂದ
ಹೂವಿನ ಜೇನನು ಹೀರುತ ಬರುವ
ನಿನ್ನಯ ನೋಟವು ಬಲು ಚಂದ

**ಸುಧನ್ವ**

# My Friend



My best friend
She is my little piece of perfection
But she don’t believe it.
So she picks up the blade and turns up
the music and tunes the world out
She is hunting so much.
She doesn’t  know she  is hurting me too.
One cut on her wrist..
Is two on mine

**Namitha**

## ಕರುಳ ಕೂಗು

ಬೆವರು ಬಸಿದು ರಕ್ತ ಹಿಂಡಿ
ತುತ್ತು ಅನ್ನಕ್ಕಾಗಿ ಅಲೆದು
ರಾತ್ರಿ ಹಗಲು ಕಷ್ಟಗೈದು
ಪ್ರೀತಿಯಿಂದ ಸಾಕಿ ಸಲಹಿ
ಎದೆಯೆತ್ತರ ಬೆಳೆದ ಮಗನು
ಕಾಣದಾದನೋ...ನಮ್ಮ ಕಾಪಾಡುವನೋ.....

ಬಡಕಲಾದ ಜೀವ ಎರಡು
ಸೂರುಗಂಜಿಯಿಲ್ಲದಾಗಿ
ದುಡುಮೆ ಮಾಡಲಾಗದೆಯೇ
ದಾರಿಕಾದೆವ್ರೋ , ಮೋನು
ಬರುವನೆಂಬ ಕನಸು ಕಂಡು
ಕಾಣದಾದನೋ...ನಮ್ಮ ಕಾಪಾಡುವನೋ.....

ಸುಕ್ಕುಗಟ್ಟಿ ನಿಂತ ಮುಖದಿ
ಚಿಂತೆ ಕ್ರಾಂತರಾದ ಮನಸು
ಎಡವಿ ತಡವಿ ದಿಟ್ಟಿಸುತ್ತ
ಕಾಯುತ್ತಿರುವ ಜೀವವೆರಡು
ಮನದೆ ದು:ಖಿಸುತ್ತ ಕಳೆದು
ಕಾಣದಾದನೋ...ನಮ್ಮ ಕಾಪಾಡುವನೋ.....

****************

ಪ್ರಬಂಧ..............

# ಜನಸಂಖ್ಯಾ ಸ್ಫೋಟ
## ಭಾರತ ಎದುರಿಸುತ್ತಿರುವ ಸಮಸ್ಯೆಗಳು

ಇಂದು ಭಾರತವು ಎದುರಿಸುತ್ತಿರುವ ಅತಿ ದೊಡ್ಡ ಸಮಸ್ಯೆಯಾಗಿದೆ ಜನಸಂಖ್ಯಾ ಹೆಚ್ಚಳ. ಆದುದರಿಂದ ಜುಲಾಯಿ ೨೧ ಜನಸಂಖ್ಯಾ ದಿನವನ್ನಾಗಿ ಆಚರಿಸುತ್ತಾರೆ. ಜನಸಂಖ್ಯಾ ಹೆಚ್ಚಳದಲ್ಲಿ ಭಾರತವು ಎರಡನೇ ಸ್ಥಾನದಲ್ಲಿದೆ.ಜನಸಂಖ್ಯಾ ಎಂದರೆ ಒಂದು ರಾಜ್ಯದ ಜನಸಂಖ್ಯೆಯನ್ನು ಅಳೆಯುವಾಗ ಸಿಗುವ ಸಂಖ್ಯೆಯೇ ಜನಸಂಖ್ಯೆ.. ಇದಕ್ಕೆ ಕಾರಣ ಜನನ ಪ್ರಮಾಣ ಹೆಚ್ಚಾಗುವುದು ಹಾಗು ಮರಣ ಪ್ರಮಾಣ ಕಡಿಮೆಯಾಗುವುದು. ಬೇರೆ ದೇಶಗಳಿಂದ ಜನರು ವಲಸೆ ಬರುವುದು. ಆಗ ಆ ದೇಶದ ಜನಸಂಖ್ಯೆಯು ಹೆಚ್ಚಾಗುತ್ತದೆ .

ಜನಸಂಖ್ಯೆಯಾ ಹೆಚ್ಚಳವು ಒಂದು ರೀತಿಯಲ್ಲಿ ಲಾಭದಾಯಕವೂ ನಷ್ಟದಾಯಕವೂ ಆಗಿದೆ . ಜನಸಂಖ್ಯೆಯು ಹೆಚ್ಚಾದಾಗ ಕೆಲಸಮಾಡುವವರ ಸಂಖ್ಯೆಯು ಹೆಚ್ಚಾಗುತ್ತದೆ. ಇದರಿಂದ ದೇಶಕ್ಕೆ ಆದಾಯವು ಬರುತ್ತದೆ . ದೇಶದ ರಾಷ್ಟ್ರೀಯ ಆದಾಯವು ಹೆಚ್ಚಾಗುತ್ತದೆ. ದೇಶದ ರಾಷ್ಟ್ರೀಯ ಆದಾಯವು ಹೆಚ್ಚಾಗುತ್ತದೆ. ದೇಶವು ಅಭಿವೃದ್ಧಿ ಯಾಗುತ್ತದೆ. ನಮ್ಮ ದೇಶದ ಸ್ಥಳಾವಾಕಾಶವು ಕಡಿಮೆಯಾದುದರಿಂದ ಜನರ ಜಂಜಾಟ ಉಂಟಾಗುತ್ತದೆ . ಎಲ್ಲಿ ನೋಡಿದರು ಜನರು . ಜನರು ಹೆಚ್ಚಾದ ಹಾಗೆ ಉತ್ಪಾದನೆಯು ಹೆಚ್ಚಿಸಬೇಕಾಗುತ್ತದೆ. ಸರಕು ಮತ್ತು ಸೇವೆಗಳ ಪ್ರಮಾಣ ಹೆಚ್ಚಾಗುತ್ತದೆ. ಜನರ ಸಂಖ್ಯೆ ಹೆಚ್ಚಾದ ಹಾಗೆ ವಾಹನಗಳ ಪ್ರಮಾಣ ಹೆಚ್ಚ್ಚಾಗುತ್ತದೆ. ವಾಹನಗಳ ಪ್ರಮಾಣ ಹೆಚ್ಚಾದ ಹಾಗೆ ಇಂಧನಗಳ ಪ್ರಮಾಣ ಹೆಚ್ಚಾಗುತ್ತದೆ. ಆದರೆ

ಭಾರತದಲ್ಲಿ ಇಂಧನಗಳ ಕೊರೆತೆ ಇರುವುದರಿಂದ ಬೇರೆ ದೇಶಗಳಿಂದ ಆಮದು ಮಾಡುತ್ತದೆ. ಆಗ ದೇಶವು ಆರ್ಥಿಕವಾಗಿ ಹಿಂದುಳಿಯುತ್ತದೆ. ಜನಸಂಖ್ಯೆ ಹೆಚ್ಚಾದ ಹಾಗೆ ಮನೆ, ಕಟ್ಟಡ ,ವಾಹನಗಳ ಸಂಖ್ಯೆ ಹೆಚ್ಚಾಗುತ್ತದೆ. ಜನರ ಸಂಖ್ಯೆಯು ಹೆಚ್ಚಾಗುವುದರಿಂದ ಶಾಲೆಗಳು ಕಾಲೇಜುಗಳು ಹೆಚ್ಚಾಗುತ್ತದೆ. ಆಗ ಸಾಕ್ಷರತೆಯ ಪ್ರಮಾಣ ಹೆಚ್ಚಾಗುತ್ತದೆ. ಆದರೆ ಜನರ ಸಂಖ್ಯೆ ಹೆಚ್ಚಾಗುವಾಗ ಜನರಿಗೆ ಬೇಕಾಗುವ ಉತ್ಪಾದನೆಗಳನ್ನು ಉತ್ಪಾದಿಸಲು ಸಾಧ್ಯವಾಗುದಿಲ್ಲ . ಆಗ ಬೇರೆ ದೇಶಗಳಿಂದ ವಸ್ತುಗಳನ್ನು ಆಮದು ಮಾಡುತ್ತೇವೆ .

ಜನಸಂಖ್ಯಾ ಸಮಸ್ಯೆಯಿಂದ ಭಾರತವು ಎದುರಿಸುವ ಪ್ರಮುಖ ಸಮಸ್ಯೆಗಳಲ್ಲಿ ಒಂದಾಗಿದೆ ಮಾಲಿನ್ಯ. ಜನಸಂಖ್ಯೆ ಹೆಚ್ಚಾದಂತೆ ಮಾಲಿನ್ಯದ ಸಮಸ್ಯೆ ಹೆಚ್ಚಾಗುತ್ತದೆ. ಹಾಗೂ ನೀರಿನ ಸಮಸ್ಯೆ . ಜನರು ನೀರಿಗೆ ಬೇಕಾಗಿ ಬೋರ್ ಬೆಲ್ ಗಳನ್ನೂ ಮಾಡುತ್ತಾರೆ, ಆದರೆ ನೀರಿನ ಅಂಶ ಕಡಿಮೆಯಾಗಿ ನೀರಿಲ್ಲದಂತಹ ಸ್ಥಿತಿ ಬರುತ್ತದೆ. ಅದೇ ರೀತಿ ಆಹಾರ. ಜನರು ಮನೆ ಕಟ್ಟಲು ಬಯಲು ಗದ್ದೆಗಳನ್ನು ಸಮತಟ್ಟಾಗಿ ಮಾಡಿ ಕೃಷಿ ನಾಶವಾಗಿ ಆಹಾರದ ಕೊರತೆಯ ಸಮಸ್ಯೆ ಬರುತ್ತದೆ.



# മഴക്കാലം

മഴക്കാലം  മഴക്കാലം
ഇതൊരു പെരുമാസക്കാലം
ആഴക്കാലം മഴക്കാലം
ഇതൊരു പെരുമാസക്കാലം
കുളവും നിറഞ്ഞത് പുഴയുംനിറഞ്ഞത്
തൊടുംനിറഞ്ഞഹോര് ആഴക്കാലം
ഇടിയുംവരുന്നു മിന്നലുംവരുന്നു
പേടിച്ചിരുന്നു കുട്ടികൾ
എന്നാൽ ഇഷ്ടമാണ് ഇഷ്ടമാണ്
മഴയെ  ഒരുപാട് ഇഷ്ടമാണ്
മഴവിടച്ച  പ്രളയം
മഴവിടച്ച  ദാരിദ്രം
എന്നാൽ ഇഷ്ടമാണ് ഒരുപാട്
ഇഷ്ടമാണെന്ന് മസായെ
ഇഷ്ടമാണെന്ന്
മഴയത്   നനയാൻ എന്തുരസം
മഴയത്   കളിയ്ക്കാൻ എന്തുരസം
മഴയെത്തിക്കാൻ    എന്തുരസം
മഴയത്   കുടപിടിക്കുന്നതിനി എന്തുരസം
ഇഷ്ടമാണ് ഇഷ്ടമാണ് മഴആയെ
ഒരുപാടിഷമാണ് എനിക്കമാസയെ
**ഒരുപാടിഷ്ടമാണ്**



# LIFE CHANGES WHEN DESTINY BRINGS

**O**nce upon a time in sunny afternoon , the villages are quiet there is no people around the village. In the village there lived a girl named Liya. She is very quiet and good in studies. She is topper in her class. Her mother was expired since a year back. Her father was a druggiest and he a very fight with Liya everyday. One day her father was expired, she was alone and cried for the remembrance of her parents.

One day she joined a new School. She get ready to school and while walking to go school ,she met a girl named Zoya. Zoya and Liya became good friends. They were studying in 10th standard. Zoya asked about Liya's family and Liya explained about her parents death. Zoya became very sad and Liya started crying. Zoya tried to stop Liya's emotion . Liya started crying again and again. When the class teacher came to class, she asked to Liya that what was going on. Zoya explained everything to teacher. Teacher convinced Liya and finally she stopped crying and felt released.

On the next day teacher surprised children by giving surprise test. When the result came the Liya was topper in class. Zoya was happy and she got second topper. Liya got a scholarship by taking good marks in exams. When the SSLC exam finished Liya and went to school to know the result . Liya was topper and the Zoya was second topper. Liya got scholarships from Govt. So she joined to hostel because there were no one to take care of her at home. By see ling this Zoya also joined to hostel.

One day teacher asked all the students about their goal. When teacher asked with Liya she replied that her goal is to become Collector. And she is working to fullfil her goal. Zoya was supporting her to reach the goal. This made teacher surprise. After 6 year Liya and Zoya were not in contact each other. Zoya was studing doctor. And she was thinking about Liya. When she saw Liya in T.V, Zoya was surprise.The news was that the Indian Collector. Zoya want to meet Liya. So she took appointment and when Zoya saw Liya she hugged her, Liya was shocked that after many years she saw her friend. When Liya meet Zoya she remember her parents.

Liya and Zoya went to beach and remembering the olden days . They were talking all the things. But Liya was engaged and her marriage was on after 2 years. In the beach when all the people saw Liya(Collector) all were over crowded around Liya and surprised that Liya was in the front of people.

Liya and Zoya were good friends, and they live happily. Thereafter with happiness and love.



**Moral:- Life changes when we work for it. And friendship makes how to support it**

***Nafisa Muskan***

***9th B***

# Govt. High School Bekur




**JUNE 5th**

## ವಿಶ್ವ ಪರಿಸರ ದಿನ



# ವಾಚನ ವಾರಾಚರಣೆ




## ಜೂನ್ 19 ರಿಂದ 25 ರವರೆಗೆ



## ಪ್ರಬಂಧ ರಚನೆ ಮತ್ತು ಪುಸ್ತಕ ಪ್ರದರ್ಶನ




## **JUNE** *21 2019*




# YOGA DAY CELEBRATION




## ಲಿಟಿಲ್ ಕೈಟ್ಸ್ ಉಧ್ಘಾಟನೆ ಮತ್ತು ಅರ್ಹತಾ ಪರೀಕ್ಷೆ








## ಲೇಖಕಿ ಲೀಲಾ ಮಣ್ಣಾಲ ಅವರ ಜೊತೆಗೆ ಒಂದು ಕ್ಷಣ



## ವಿವಿಧ ಸಂಘಗಳ ಉದ್ಘಾಟನಾ ಸಮಾರಂಭ



ಈ ಸಮಾರಂಭವನ್ನು ಹಿರಿಯ ಅಧ್ಯಾಪಿಕೆ ಹಸೀನಾ ಟೀಚರ್ ಉದ್ಘಾಟಿಸಿ ಕಾರ್ಯಕ್ರಮಕ್ಕೆ ಶುಭ ಹಾರೈಸಿದರು.

ಸಮಾರಂಭದ ಅಧ್ಯಕ್ಷರಾಗಿ ಶ್ರೀ ದಿನೇಶ ಕೆ.ವಿ ಮಾತಾನಾಡಿದರು. ಮೊಹಮ್ಮದ್ ಮಾಸ್ಟರ್ ಶುಭ ಹಾರೈಸಿ ಮಾತನಾಡಿದರು. ಇದರೊಂದಿಗೆ ವಾಚನಾ ವಾರಾಚರಣೆಯ ಸ್ಪರ್ಧಾ ವಿಜೇತರಿಗೆ ಬಹುಮಾನ ನೀಡಲಾಯಿತು. ಆ ಮೂಲಕ ವಾಚನಾ ವಾರಾಚರಣೆಯು ಸಮಾಪನಗೊಂಡಿತು. ಹರೀಶ್ ಮಾಸ್ಟರ ಸ್ವಾಗತದೊಂದಿಗೆ ಆರಂಭಗೊಂಡ ಈ ಕಾರ್ಯಕ್ರಮವು ಭಾಗ್ಯಲಕ್ಷ್ಮಿ ಟೀಚರ ಧನ್ಯವಾದ ಹಾಗೂ ಮಿನೀಶ್ ಮಾಸ್ಟರ ನಿರೂಪಣೆಯೊಂದಿಗೆ ಸಂಪನ್ನಗೊಂಡಿತು.

# ಜಲ ಸಂರಕ್ಷಣೆ ದಿನಾಚರಣೆ



ಜಲ ಸಂರಕ್ಷಣೆ ದಿನಾಚರಣೆಯ ಪ್ರಯುಕ್ತ ಪೋಸ್ಟರ್ ತಯಾರಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು

# ಚಾಂದ್ರಾ ದಿನಾಚರಣೆ



ಚಾಂದ್ರಾ ದಿನಾಚರಣೆಯ ಪ್ರಯುಕ್ತ ರಸಪ್ರಶ್ನೆ ಕಾರ್ಯಕ್ರಮವನ್ನು ವಿಜ್ಞಾನ ಸಂಘದ ವತಿಯಿಂದ ನಡೆಸಲಾಯಿತು. ಈ ಸ್ಪರ್ಧೆಯಲ್ಲಿ ಜಾಸೀಮ್, ಓಜಸ್ ಹಾಗೂ ಶ್ರೇಯ ವಿಜೇತರಾಗಿ ಆಯ್ಕೆಯಾದರು.

## 10 th Std C P T A Meeting



ಹತ್ತನೆ ತರಗತಿಯ ರಕ್ಷಕ ಶಿಕ್ಷಕ ಸಭೆಯ ಅಧ್ಯಕ್ಷ ಸ್ಥಾನವನ್ನು ಶಾಲಾ ಮುಖ್ಯೋಪಾಧ್ಯಾಯಿನಿ ಶ್ರೀಮತಿ ಲಕ್ಷ್ಮಿ ಎಂ. ಎ ಅವರು ಅಲಂಕರಿಸಿದ್ದು ಹೆತ್ತವರಿಗೆ ಸೂಕ್ತ ಸಲಹೆ ಸೂಚನೆಗಳನ್ನು ನೀಡಿದರು. ಈ ಕಾರ್ಯಕ್ರಮದಲ್ಲಿ ರಕ್ಷಕ ಶಿಕ್ಷಕ ಸಂಘದ ಉಪಾಧ್ಯಕ್ಷರಾದ ಅಶೋಕ ನಾವಡ ಎಂ ,ಅಧ್ಯಾಪಕ ಸಂಘದ ಕಾರ್ಯದರ್ಶಿ ದಿನೇಶ್ ಕೆ.ವಿ, ಹಿರಿಯ ಅಧ್ಯಾಪಿಕೆ ಹಸೀನಾ ,ಹಮೀದ್ ಪಿ ಸಭೆಯನ್ನುದ್ದೇಶಿಸಿ ಮಾತಾನಾಡಿದರು. ಬಳಿಕ ಶ್ರೀಮತಿ ಭಾಗ್ಯಲಕ್ಷ್ಮಿ ಹಾಗೂ ಶ್ರೀಮತಿ ಸುಷ್ಮಾ ಅವರು ಹೆತ್ತವರಿಗೆ ವಿಶೇಷ ತರಗತಿಯೊಂದನ್ನು ನೀಡಿದರು. ಹರೀಶ್ ಕುಮಾರ್ ಅವರ ಸ್ವಾಗತದೊಂದಿಗೆ ಆರಂಭಗೊಂಡ ಕಾರ್ಯಕ್ರಮವು ರತ್ನರಾಜ್ ಅವರ ಧನ್ಯವಾದದೊಂದಿಗೆ ಕೊನೆಗೊಂಡಿತು.

## UP Section and H.S Section CPTA Meeting



## WORLD ADOLESCENT DAY PROGRAMME
MAGAZINE "BLOSSOM"



## Aug 15th INDEPENDENCEDAY CELEBRATION



## UP LEVEL VIJANOTHSAVA PROGRAMME



## ಆರೋಗ್ಯ ಸಮಸ್ಯೆಯಿಂದ ಬಳಲುತ್ತಿರುವ ಮಕ್ಕಳ ಕುಟುಂಬಗಳಿಗೆ ಆರ್ಥಿಕ ನೆರವು

SHREEJITH AND ROSTHAN



# ರಕ್ಷಕ– ಶಿಕ್ಷಕ ಸಂಘದ ವಾರ್ಷಿಕ ಮಹಾಸಭೆ









## 2018-19 S S L C TOP SCORE WINNERS









# ಕಲಾವತರಣ ೨೦೧೯ ಸಂಚಿಕೆ ಬಿಡುಗಡೆ



# FIRST TERM EVALUVATION 2019-20



# Onam Celebration




# FOOD & SAFETY ACT



# WORLD HAND WASHING DAY







# LITTLE KITES ONE DAY CAMP







# GANDHI JAYANTHI









# ದಸರಾ ನಾಡಹಬ್ಬ ಮಹೋತ್ಸವ









# School Kalolsavam



# Sub Dist.Social Fair Runners



# Sub Dist. Kalolsavam



# FIT INDIA LAUNCHING PROGRAMME




GOVT HIGHER SECONDARY SCHOOL, BEKUR
ಸರಕಾರಿ ಉನ್ನತ ಪ್ರೌಢ ಶಾಲೆ, ಬೇಕೂರು
ഗവൺമെന്റ് ഹയർസെക്കണ്ടറി സ്കൂൾ
ബേക്കൂർ
Educational District :- Kasaragod / Educational Subdistrict :- Manjeshwar



# ಧನ್ಯವಾದಗಳು




science
Art
school
EDUCATION